## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಳಿಯಾಳ.

## ಸಿ.ಸಿ.ನಂಬರ. 1536/2022

ಫಿರ್ಯಾದಿ : ಕರ್ನಾಟಕ ಸರಕಾರ
ಹಳಿಯಾಳ ಪೋಲಿಸ ಠಾಣೆ, ಹಳಿಯಾಳ.

ವಿರುದ್ಧ

ಆರೋಪಿತರು : 1. ದುರ್ಗಪ್ಪ ತಂದೆ ಮಾರುತಿ ಹೆಳವರ,
ವಯಸ್ಸು : 23 ವರ್ಷ, ವೃತ್ತಿ : ಗೌಂಡಿ ಕೆಲಸ,
ಸಾಃ ಹೊಸ ಹಡಗಲಿ, ತಾಃ ಹಳಿಯಾಳ, ಜಿಃ ಉ.ಕ.

2. ಸಮೀರವುಲ್ಲಾ ಅಲಿಯಾಸ ಸಮೀರ ತಂದೆ ಸೊಹೆಲ್ ಬೇಪಾರಿ,
ವಯಸ್ಸು : 22 ವರ್ಷ, ವೃತ್ತಿ : ಕೂಲಿ ಕೆಲಸ,
ಸಾಃ ಚವ್ಹಾಣ ಪ್ಲಾಟ್, ಹಳಿಯಾಳ ಶಹರ, ತಾಃ ಹಳಿಯಾಳ, ಜಿಃ ಉ.ಕ.

3. ಜುಬೇರಖಾನ್ ತಂದೆ ಆಲಂಖಾನ್ ಪಠಾಣ್,
ವಯಸ್ಸು : 25 ವರ್ಷ, ವೃತ್ತಿ : ಚಾಲಕ ಕೆಲಸ,
ಸಾಃ ಸಿದ್ದಾರೋಢ ಮಠದ ಹತ್ತಿರ, ಹಳೇ ಹುಬ್ಬಳ್ಳಿ

4. ಕಿಶನ್ ತಂದೆ ಅನುರಾಜ ಗೊಂದಳಿ,
ವಯಸ್ಸು : 29 ವರ್ಷ, ವೃತ್ತಿ : ಡ್ರೈವರ್ ಕೆಲಸ,
ಸಾಃ ಚವ್ಹಾಣ ಪ್ಲಾಟ್, ಹಳಿಯಾಳ ಶಹರ, ತಾಃ ಹಳಿಯಾಳ, ಜಿಃ ಉ.ಕ.

## <u>ದೋಷಾರೋಪಣೆ</u>

ನಾನು ಗೀತಾ., ಪ್ರ.ದ.ನ್ಯಾದಂ ಹಳಿಯಾಳ ಆದ ನಾನು ಈ ಮೂಲಕ ನಿಮ್ಮ ಮೇಲೆ ಮಾಡುವ ದೋಷರೋಪಣೆ ಏನೆಂದರೆ.

ದಿನಾಂಕ 02-11-2021 ರಂದು ಸಂಜೆ 07-00 ರ ಸಮಯದಲ್ಲಿ ಹಳಿಯಾಳ ಪೋಲಿಸ ಠಾಣಾ ಸರಹದ್ದಿನ ಹಾಗೂ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವ ಹಳಿಯಾಳ ಶಹರದ ಆನಂದ ಸಾಗರ ಹೊಟೇಲ ಹತ್ತಿರ ಪಿರ್ಯಾದಿದಾರರು ತಮ್ಮ ಮೋಟಾರ ಸೈಕಲ್ ನಂಬರ ಕೆಎ-31-ಎಲ್-9490 ನೇದ್ದನ್ನು ನಿಲ್ಲಿಸಿದ್ದನ್ನು 1, 2 ಮತ್ತು 4 ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಕಳುವು ಮಾಡುವ ಮೂಲಕ ನೀವು ಭಾ.ದಂ.ಸಂ. ಕಲಂ 379 ಸಹವಾಚಕ ಕಲಂ 34 ರ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆಪಾದಿಸಲಾಗಿದೆ.

ಎರಡನೇಯದಾಗಿ, ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಮತ್ತು ಸ್ಥಳದಲ್ಲಿ ಪಿರ್ಯಾದಿಗೆ ಸಂಬಂಧಿಸಿದ ಮೋಟಾರ ಸೈಕಲ್ ನಂಬರ ಕೆಎ-31-ಎಲ್-9490 ನೇದ್ದನ್ನು 1, 2 ಮತ್ತು 4 ನೇ ಆರೋಪಿತರು ಕಳುವು ಮಾಡಿದ ಮಾಲೆಂದು ಗೊತ್ತಿದ್ದರೂ ಸಹ 3 ನೇ ಆರೋಪಿಯಾದ ನೀವು ಸದರಿ ಮೋಟಾರ ಸೈಕಲ್ ಅನ್ನು ಸ್ವೀಕರಿಸಿ ಸದರಿ ಮೋಟಾರ ಸೈಕಲ ಅನ್ನು ಯಾರೂ ಖರೀದಿಸದೇ ಇದಿದ್ದರಿಂದ ಸಾಕ್ಷಿ ಹಾಳು ಮಾಡುವ ಉದ್ದೇಶದಿಂದ ಅದರ ಬಿಡಿ ಭಾಗಗಳನ್ನು ಬಿಚ್ಚಿ ಬರ ಹೋಗುವ ಗುಜರಿ ವ್ಯಾಪಾರಿಗಳಿಗೆ ರೂ.4,000/- ಗಳಿಗೆ ಮಾರಾಟ ಮಾಡಿ, ಇನ್ನೂ ಕೆಲವು ಬಿಡಿ ಬಾಗಗಳನ್ನು ಚಾಸಾ 14 ರವರ ಮನೆಯಲ್ಲಿ ಅಪರಾಧದ ಸಾಕ್ಷ್ಯ ಇಲ್ಲದಂತೆ ಹಾಗೂ ಅಪರಾಧದಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸಾಕ್ಷ್ಯ ನಾಶಪಡಿಸುವ ಮೂಲಕ ನೀವು ಭಾ.ದಂ.ಸಂ. ಕಲಂ 201 ಸಹವಾಚಕ ಕಲಂ 34 ರ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆಪಾದಿಸಲಾಗಿದೆ.

ಕೊನೆಯದಾಗಿ ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಮತ್ತು ಸ್ಥಳದಲ್ಲಿ ಪಿರ್ಯಾದಿಗೆ ಸಂಬಂಧಿಸಿದ ಮೋಟಾರ ಸೈಕಲ್ ನಂಬರ ಕೆಎ-31-ಎಲ್-9490 ಅನ್ನು 1, 2 ಮತ್ತು 4 ನೇ ಆರೋಪಿತರು ಕಳುವು ಮಾಡಿದ ಮಾಲೆಂದು ಗೊತ್ತಿದ್ದರೂ 3 ನೇ ಆರೋಪಿಯಾದ ನೀವು ಮೇಲೆ ಹೇಳಿದ ಮೋಟಾರ ಸೈಕಲ ಅನ್ನು ಸ್ವೀಕರಿಸುವ ಮೂಲಕ ನೀನು ಭಾ.ದಂ.ಸಂ. ಕಲಂ 411 ರ ಸಹವಾಚಕ ಕಲಂ 34 ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆಪಾದಿಸಲಾಗಿದೆ.

ಆರೋಪಿ ಕ್ರ.1

ಪ್ರಶ್ನೆ 1 : ಸದ್ರಿ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ 2: ಸದ್ರಿ ದೊಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

ಉತ್ತರ : ವಿಚಾರಣೆಯಾಗಬೇಕು

ಆರೋಪಿ ಕ್ರ.2

ಪ್ರಶ್ನೆ 1 : ಸದ್ರಿ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ 2: ಸದ್ರಿ ದೊಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

ಉತ್ತರ : ವಿಚಾರಣೆಯಾಗಬೇಕು

ಆರೋಪಿ ಕ್ರ.3

ಪ್ರಶ್ನೆ 1 : ಸದ್ರಿ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ 2: ಸದ್ರಿ ದೊಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

ಉತ್ತರ : ವಿಚಾರಣೆಯಾಗಬೇಕು

ಆರೋಪಿ ಕ್ರ.4

ಪ್ರಶ್ನೆ 1 : ಸದ್ರಿ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ 2: ಸದ್ರಿ ದೊಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

ಉತ್ತರ : ವಿಚಾರಣೆಯಾಗಬೇಕು

(ದೊಷಾರೋಪಣೆಯ ಸಾರಾಂಶವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

ಸದರ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಜರುಗುವುದರಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ಸ್ಥಳ : ಹಳಿಯಾಳ.

ದಿನಾಂಕ : 08-01-2026.

ಪ್ರ.ದ.ನ್ಯಾದಂ., ಹಳಿಯಾಳ.